ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನವನ್ನು ಭೋಧಿಸಲಾದ ದಿನಾಂಕಃ 17.07.2026

ಮುಂದುವರೆದ ಪಾಟೀ ಸವಾಲು ಃ ಪ್ರತಿವಾದಿ ಪರ ಶ್ರೀ.ಮತಿ ಆರ್.ಹೆಚ್.ಆರ್ ವಕೀಲರಿಂದ

1. ಕ್ರಯದ ಮಾತುಕತೆಯ ಸಮಯದಲ್ಲಿ ದಾವಾ ಸ್ವತ್ತಿಗೆ ಸಂಬಂಧಪಟ್ಟ ದಾಖಲೆಗಳನ್ನು ನಾನು ಪರಿಶೀಲಿಸಿರುವುದಿಲ್ಲ. ನಾನು ಮಾತುಕತೆಯ ದಿನ ಪ್ರತಿವಾದಿಗೆ 14,00,000/- ರೂಪಾಯಿ ಪಾವತಿ ಮಾಡಿರುತ್ತೇನೆ ಎಂದು ತಿಳಿಸಿದ್ದು ಈ ಬಗ್ಗ ಅದೇ ದಿನ ಪಾವತಿಗೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನು ನಾನು ಬರೆಸಿಕೊಂಡಿರುವುದಿಲ್ಲ. ನಾನು ಹಣ ನೀಡಿದ ಹದಿನೈದು ದಿನಗಳ ನಂತರ ಪತ್ರ ಬರವಣಿಗೆ ಆಗಿರುತ್ತದೆ. ಸಾಕ್ಷಿ ಮುಂದುವರೆದು ಪತ್ರ ಬರೆದ ದಿನವೇ ಮಾತುಕತೆಯಾಗಿದ್ದು ಅದೇ ದಿನ 14,00,000/- ರೂಪಾಯಿಗಳನ್ನು ಸಬ್ ರಿಜಿಸ್ಟ್ರಾರ್ ಕಛೇರಿಯ ಬಳಿ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಪತ್ರವನ್ನು ಯಾವಾಗ ಬರೆಯಲಾಗಿದೆ ಎಂದು ನನಗೆ ನೆನಪಿಲ್ಲ. ಹಣ ನೀಡಿದ ದಿನಾಂಕ ನನಗೆ ನೆನಪಿಲ್ಲ. ಕ್ರಯದ ಕರಾರು ಪತ್ರವನ್ನು ಫೆಬ್ರುವರಿ 2020 ರಲ್ಲಿ ಬರೆಸಿಕೊಂಡಿರುತ್ತೇನೆ. ಕ್ರಯದ ಕರಾರು ಪತ್ರ ಬರೆದುಕೊಡುವ ಸಮಯದಲ್ಲಿ ಪ್ರತಿವಾದಿಯ ಮಗನಾದ ಕೃಷ್ಣಮೂರ್ತಿ, ನಮ್ಮ ಗ್ರಾಮದ ಸೋಮು ಮತ್ತು ರವಿ ಇದ್ದರು. ಪ್ರತಿವಾದಿಯ ಮಗನಾದ ಕೃಷ್ಣಮೂರ್ತಿ ಹಾಜರಿದ್ದರು ಆತನ ಸಹಿಯನ್ನು ಯಾಕೆ ಪಡೆದುಕೊಳ್ಳಲಿಲ್ಲ ಎಂದರೆ ಸಾಕ್ಷಿಯು ಸಾಕ್ಷಿದಾರರು ಬೇಡ ಎಂದು ತಿಳಿಸಿದರು ಎಂದು ನುಡಿಯುತ್ತಾರೆ. ಹಣ ನೀಡುವ ಸಮಯದಲ್ಲಿ ಸೋಮು ಮತ್ತು ರವಿ ಇದ್ದರು.

2. ಪ್ರತಿವಾದಿಯನ್ನು ನನಗೆ 25 ವರ್ಷಗಳಿಂದ ಪರಿಚಯ ಇದ್ದಾರೆ. ಅವರಿಗೆ ಸುಮಾರು 80 ವರ್ಷಕ್ಕಿಂತಲೂ ವಯಸ್ಸಾಗಿದೆ ಎಂದರೆ ಸರಿ. ಇತ್ತೀಚೆಗೆ ನಾನು ಪ್ರತಿವಾದಿಯನ್ನು ಮಾತನಾಡಿಸಿರುವುದಿಲ್ಲ. ಮಾತುಕತೆಯ ಸಮಯದಲ್ಲಿ ಅವರು ಚೆನ್ನಾಗಿದ್ದರು. ಪತ್ರ ಬರೆಯುವ ಸಮಯದಲ್ಲಿ ಅವರಿಗೆ 80 ವರ್ಷ ವಯಸ್ಸಾಗಿತ್ತು ಮತ್ತು ಅವರಿಗೆ ಕಿವಿ ಕೇಳಿಸುತ್ತಿರಲಿಲ್ಲ ಹಾಗೂ ಮಾತನಾಡಲು ಅಗುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ಮಾಡಿಸಿಕೊಂಡಿರುವ ಮೂಲ ಕರಾರು ಪತ್ರವು ನಮ್ಮ ಮನೆಯಲ್ಲಿ ಇದೆ.

3. ನಾನು ಭತ್ತವನ್ನು ಮಾರಾಟ ಮಾಡಿ ಐದು ಲಕ್ಷ ರೂಪಾಯಿಯನ್ನು, ನನ್ನ ನಾಲ್ಕು ಜನ ಸಹೋದರರ ಬಳಿ ತಲಾ ಎರಡು ಲಕ್ಷ ರೂಪಾಯಿಗಳನ್ನು ಪಡೆದು ಸೇರಿಸಿ ಪ್ರತಿವಾದಿಗೆ 14,00,000/- ರೂಪಾಯಿಗಳನ್ನು ನೀಡಲು ಹಣ ಹೊಂದಿಸಿರುತ್ತೇನೆ. ನಾನು ಭತ್ತ ಮಾರಾಟ ಮಾಡಿರುವುದಕ್ಕೆ ಯಾವುದೇ ದಾಖಲೆ ಇಲ್ಲ. ನನ್ನ ನಾಲ್ಕು ಜನ ಸಹೋದರರ ಬಳಿ ಹಣ ಪಡೆದುಕೊಂಡಿರುವುದಕ್ಕೆ ಯಾವುದೇ ರೀತಿಯ ದಾಖಲೆಯು ಸಹ ನನ್ನ ಬಳಿ ಇಲ್ಲ.

4. ನಾನು ಎರಡು ಆಸ್ತಿಯನ್ನು ಖರೀದಿಸಲು ಕ್ರಯದ ಕರಾರು ಪತ್ರ ಬರೆಸಿಕೊಂಡಿರುತ್ತೇನೆ. ನಾನು ದಾವಾ ಸ್ವತ್ತುಗಳನ್ನು ನೋಡಿದ್ದು, ಪ್ರತಿವಾದಿಯು ಅಲ್ಲಿ ತೆಂಗು ಬೆಳೆ ಬೆಳೆದಿರುತ್ತಾರೆ. ಎರಡು ಸರ್ವೇ ನಂಬರ್ ಗಳಲ್ಲಿ ತೆಂಗು ಬೆಳೆ ಬೆಳೆದಿರುತ್ತಾರೆ. ಉಳಿಕೆ ಹಣ ಪಾವತಿ ಮಾಡಲು ನನ್ನ ಬಳಿ ಹಣ ಇದೆ. ನನ್ನ ಬಳಿ ಹಣ ಇದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಪ್ರತಿವಾದಿ ಕ್ರಯಪತ್ರ ಬರೆದುಕೊಡದೆ ಇರುವ ಕಾರಣ ದಾವಾ ದಾಖಲಿಸಿರುತ್ತೇನೆ. ಮೂರು ವರ್ಷಗಳು ಆದ ನಂತರ ಪ್ರತಿವಾದಿಯು

ಕ್ರಯಪತ್ರ ಬರೆದುಕೊಡಲು ನಿರಾಕರಿಸಿರುತ್ತಾರೆ. ನಾನು ಹೋಗಿ ಕೇಳಿದಾಗ ಪ್ರತಿವಾದಿಯು ಈಗ ಬರೆದುಕೊಡಲು ಆಗುವುದಿಲ್ಲ ಎಂದು ತಿಳಿಸಿರುತ್ತಾರೆ. ಕೂಡಲೇ ನಾನು ವಕೀಲರ ಮುಖಾಂತರ ನೋಟೀಸ್ ನೀಡಿರುತ್ತೇನೆ. ಆದರೆ ದಿನಾಂಕ ನೆನಪಿಲ್ಲ. ನೋಟೀಸ್ ಜಾರಿಯಾಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ, ಮರು ಜವಾಬು ನೀಡಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ನೋಟೀಸ್ ಜಾರಿಯಾದ ಬಗ್ಗೆ ಯಾವುದೇ ದಾಖಲೆಗಳನ್ನು ಸಲ್ಲಿಸಿಲ್ಲ ಎಂದರೆ ಸರಿ. ಪ್ರತಿವಾದಿಯು ನನ್ನ ಅಕ್ಕನ ಸ್ವಂತ ಮಾವನಾಗಿದ್ದು ಆತನಿಗೆ ಯಾವುದೇ ಹಣ ಪಾವತಿ ಮಾಡದೇ ಮೋಸ ಮಾಡುವ ದುರುದ್ದೇಶದಿಂದ ಸೊಸೈಟಿಯಲ್ಲಿ ಸಾಲ ಕೊಡಿಸುತ್ತೇನೆಂದು ಕರೆದುಕೊಂಡು ಹೋಗಿ ನಾನು ಮತ್ತು ನನ್ನ ಭಾವ ಅಂದರೆ ಪ್ರತಿವಾದಿಯ ದೊಡ್ಡ ಮಗ ಪರಸ್ಪರ ಶ್ಯಾಮಿಲಾಗಿ ದಾಖಲೆಯನ್ನು ಸೃಷ್ಠಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

5. ದಾವಾ ಆಸ್ತಿಯಲ್ಲಿ ತೆಂಗಿನ ಮರವನ್ನು ಹೊರತುಪಡಿಸಿ ಬೇರೆ ಯಾವುದೇ ರೀತಿಯ ಫಸಲಾಗಲೀ ಮನೆಯಾಗಲೀ ಇಲ್ಲ. ದಾವಾ ಐಟಂ ನಂಬರ್ 2 ರಲ್ಲಿ ನನ್ನ ಭಾವನಾದ ಕುಮಾರವರ ಮನೆಯಿದೆ ಎಂದರೆ ಸಾಕ್ಷಿಯು ಈಗ ಮನೆ ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ನನ್ನ ಭಾವನ ಮನೆಯು ಅಲ್ಲಿ ಇರುವ ಕಾರಣ ಪ್ರತಿವಾದಿಯ ಮಕ್ಕಳಿಗೆ ವಿಭಾಗ ಕೊಡಬಾರದು ಅದು ನನ್ನ ಭಾವನಿಗೆ ಸೇರಬೇಕೆಂಬ ದುರುದ್ದೇಶದಿಂದ ಕ್ರಯದ ಕರಾರು ಪತ್ರವನ್ನು ಸೃಷ್ಠಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಯಾವುದೇ ರೀತಿಯ ವ್ಯವಹಾರದ ಅಥವಾ ಜ್ಞಾಪಕ ಶಕ್ತಿ ಇಲ್ಲದೇ ಇರುವ ಕಾರಣ ಆತನನ್ನು ಕರೆದುಕೊಂಡು ಹೋಗಿ ಪತ್ರ ಸೃಷ್ಠಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು

ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ.

(ದೇವರಾಜು ಹೆಚ್.ಆರ್.)
**C/C** 1ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಕೆ.ಆರ್.ಪೇಟೆ.